## ಶ್ರೀಮಾತೆಯವರ ಎರಡು ಸ್ಮೃತಿಚಿತ್ರಗಳು

# ಮಾತೆಯ ಕರುಣೆಯನ್ನು ಹೇಗೆ ಮರೆಯಲಿ?

ಕೇಶವಚಂದ್ರ ನಾಗ್

ನನ್ನ ಎರಡನೇ ಅತ್ತಿಗೆ ತರುಬಾಲಾ ಕನಸಿನಲ್ಲಿ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದಿದ್ದಳು. ಜಿತು ಅಣ್ಣನಿಗೆ (ಸ್ವಾಮಿ ವಿಶುದ್ಧಾನಂದರು; ಅವರು ಪೂರ್ವಾಶ್ರಮದಲ್ಲಿ ಹುಗ್ಲಿ ಜಿಲ್ಲೆಯಲ್ಲಿದ್ದ ನಮ್ಮ ಹಳ್ಳಿ ಗುರಪ್‌ನಲ್ಲಿ ನಮಗೆ ನೆರೆಹೊರೆಯವರು — ಜಿತೇಂದ್ರನಾಥ ರಾಯ್ ಎಂದು ಅವರ ಆಗಿನ ಹೆಸರು) ಈ ವಿಷಯವನ್ನು ತಿಳಿಸಿದಾಗ ಅವರು, ''ಶ್ರೀಮಾತೆ 'ಉದ್ಬೋಧನ'ದಲ್ಲಿ ಇದ್ದಾರೆ. ಅವರ ಬಳಿಗೆ ಹೋಗಿ ನಿನ್ನ ಅತ್ತಿಗೆ ಅವರಿಗೆ ಕನಸಿನ ವಿಚಾರ ತಿಳಿಸಲಿ'' ಎಂದಿದ್ದರು. ಅದು ೧೯೧೬ ನೇ ಇಸವಿ. ಆಗ ನನಗೆ ೧೭-೧೮ ವರ್ಷ. ಮನೆಯಿಂದ ಅತ್ತಿಗೆಯೊಂದಿಗೆ ಹೊರಟು, ರೈಲುಗಾಡಿಯಲ್ಲಿ ಕಲ್ಕತ್ತೆಗೆ ಹೋದೆವು. 'ಉದ್ಬೋಧನ'ಕ್ಕೆ ಬಂದಾಗ ಮಧ್ಯಾಹ್ನವಾಗಿತ್ತು. ಭೋಜನದ ಗಂಟೆಯಾಗಿತ್ತು, ಎಲ್ಲರೂ ಊಟಕ್ಕೆ ಕುಳಿತಿದ್ದರು. ನಾನು ಹಾಗೂ ಅತ್ತಿಗೆ ಸ್ವಾಮಿ ಶಾರದಾನಂದಜಿಯವರ ಆಫೀಸ್ ಕೋಣೆಯಲ್ಲಿ ಕುಳಿತೆವು. ಅಷ್ಟರಲ್ಲಿ 'ಇಬ್ಬರು ಭಕ್ತರು ಬಂದಿದ್ದಾರೆ' ಎಂದು ಯಾರೋ ಮೇಲಂತಸ್ತಿಗೆ ಸುದ್ದಿ ಮುಟ್ಟಿಸಿದ್ದರು. ಮೇಲಿನಿಂದ ಜೋರಾಗಿ ಮಹಿಳೆಯೊಬ್ಬರು ''ಯಾರಪ್ಪಾ'' ಎಂದು ಕೂಗಿದ ಸದ್ದು ಕೇಳಿಸಿತು. ಆಗ ಸ್ವಾಮಿ ಶಾರದಾನಂದಜಿ, ''ಗುರಪ್‌ನಿಂದ ಒಬ್ಬ ಹುಡುಗ, ಮತ್ತೆ ಒಬ್ಬರು ಮಹಿಳೆ ಬಂದಿದ್ದಾರೆ. ಅವರು ಶ್ರೀಮಾತೆಯವರಿಗೆ ಪ್ರಣಾಮ ಮಾಡಬೇಕಂತೆ'' ಎಂದರು. ಹಾಗೆ ಜೋರಾಗಿ ಕೂಗಿಕೊಂಡ ಮಹಿಳೆ ಗೋಲಾಪ್ ಮಾ ಎಂದು ಅನಂತರ ನನಗೆ ತಿಳಿಯಿತು. ಗೋಲಾಪ್-ಮಾ ದೊಡ್ಡದಾಗಿ ಧ್ವನಿ ಮಾಡುತ್ತ ಮಾತನಾಡುತ್ತಿದ್ದರು; ಯೋಗಿನ್ ಮಾ ಸಣ್ಣ ಧ್ವನಿಯಿಂದ — ಇದು ಆಮೇಲೆ ನನಗೆ ತಿಳಿಯಿತು. 'ಮೊದಲು ಅವರು ಪ್ರಸಾದ (ಅಂದರೆ, ಊಟ) ತೆಗೆದುಕೊಳ್ಳಲಿ, ಅನಂತರ ಮಾತನಾಡಬಹುದು' ಎಂದು ಶ್ರೀಮಾತೆ ತಿಳಿಸಿದ್ದರಂತೆ, ನನಗೆ ಆಮೇಲೆ ತಿಳಿಯಿತು. ನಾವು ಊಟ ಮಾಡಿದೆವು. ಆದರೆ ನನಗೆ ಶ್ರೀಮಾತೆಯವರ ದರ್ಶನವಾಗಲಿಲ್ಲ. ನನ್ನ ಅತ್ತಿಗೆ ಶ್ರೀಮಾತೆಯವರಿಗೆ ತಮ್ಮ ಕನಸಿನ ವಿಚಾರ ತಿಳಿಸಿದರು. ಶ್ರೀಮಾತೆ ಅವರ ಮಾತನ್ನೆಲ್ಲ ಕೇಳಿಸಿಕೊಂಡು, ಅಂದೇ ಅವರಿಗೆ ಮಂತ್ರದೀಕ್ಷೆ ನೀಡಿದರು. ಈ ಎಲ್ಲ ವಿಷಯವನ್ನು ನಾನು ಜಿತು ಅಣ್ಣನಿಗೆ ತಿಳಿಸಿದೆ. ಅವರು 'ಕಥಾಮೃತ'(ಅಂದರೆ, 'ಶ್ರೀರಾಮಕೃಷ್ಣ ವಚನವೇದ', ಮೂಲ ಬಂಗಾಳಿಯಲ್ಲಿ) ಓದಲು ಹೇಳಿದರು. ಹಾಗೂ ಎಲ್ಲಕ್ಕಿಂತಲೂ ಹೆಚ್ಚಿನದಾಗಿ ಶ್ರೀರಾಮಕೃಷ್ಣರ ಆದರ್ಶವನ್ನೇ ಮುಂದಿಟ್ಟುಕೊಳ್ಳಬೇಕು ಎಂಬುದಾಗಿ ನನಗೆ ತಿಳಿಸಿದರು.



ಅದಾದ ನಂತರ ಅನೇಕ ವರ್ಷಗಳೇ ಕಳೆದವು. ಅಲ್ಲಿಯವರೆಗೆ ಕಿಶನ್‌ಗಂಜ್‌ನಲ್ಲಿ ಕೆಲವು ಕಾಲ ಅಧ್ಯಾಪಕನಾಗಿ ಕೆಲಸ ಮಾಡಿದೆ. ಬಳಿಕ ಬಹರಂಪುರದಲ್ಲಿ ಕೃಷ್ಣನಾಥ ಕೊಲೇಜಿಯೇಟ್ ಶಾಲೆಯಲ್ಲಿ ಅಧ್ಯಾಪಕನಾಗಿದ್ದೆ. ೧೯೧೯ನೇ ಇಸವಿಯ ಜನವರಿ ಅದು. ಏನೋ ಕೆಲಸಕ್ಕಾಗಿ ನಾನು ಕಲ್ಕತ್ತೆಗೆ ಬಂದಿದ್ದೆ. ಶ್ರೀಮಾತೆಯವರು 'ಉದ್ಬೋಧನ'ದಲ್ಲಿ ಇದ್ದಾರೆಂದು ನಾನು ಕೇಳಿದೆ. ಅವರನ್ನು ಭೇಟಿಯಾಗಲು ಹೊರಟೆ. ಅದಕ್ಕೂ ಮೊದಲು ಬಲರಾಮ ಮಂದಿರದಲ್ಲಿದ್ದ ಸ್ವಾಮಿ ತುರೀಯಾನಂದರನ್ನು ಭೇಟಿಯಾದೆ. ''ಶ್ರೀಮಾತೆಯವರಿಂದ ದೀಕ್ಷೆ ಪಡೆದುಕೊಳ್ಳಬೇಕು ಎಂದಿದ್ದೇನೆ'' ಎಂದೆ. ಅದಕ್ಕೆ ಅವರು, ''ಬಹಳ ಒಳ್ಳೆಯದು. ನೀನು ತುಂಬಾ ಭಾಗ್ಯವಂತ'' ಎಂದರು. 'ಉದ್ಬೋಧನ'ದಲ್ಲಿ ಶ್ರೀಮಾತೆಯವರ ದರ್ಶನವಾದ ಕೂಡಲೇ ಅವರಿಗೆ ನಾನು ಮಂತ್ರದೀಕ್ಷೆ ಪಡೆದುಕೊಳ್ಳುವ ಇಚ್ಛೆ ನನಗಿದ್ದುದಾಗಿ ತಿಳಿಸಿದೆ.

ಶ್ರೀಮಾತೆಯವರು ನನ್ನ ಮೇಲೆ ದಯೆ ತೋರಿ ಮಹಾಮಂತ್ರವನ್ನು ನೀಡಿದರು. ಒಂದು ರುದ್ರಾಕ್ಷಿ ಮಾಲೆಯನ್ನು ಕೊಟ್ಟರು. ಶ್ರೀಮಾತೆಯವರು ಅದರಲ್ಲಿ ಜಪ ಮಾಡಿ ನನಗೆ ಕೊಟ್ಟಿದ್ದರು. ಒಂದು ಸಲ ರೈಲುಗಾಡಿಯಲ್ಲಿ ಹೋಗುತ್ತಿದ್ದಾಗ ಆ ಜಪಮಾಲೆ ಕಳೆದುಹೋಗಿತ್ತು. ಅನಂತರ ಆಶ್ಚರ್ಯಕರವೆಂಬಂತೆ ಅದು ಹೇಗೋ ನನಗೆ ಸಿಕ್ಕಿಬಿಟ್ಟಿತ್ತು. ಈ ವಿಷಯ ಹಾಗಿರಲಿ.

೧೯೪೨ನೇ ಇಸವಿ. ನನಗೆ ತೀವ್ರ ಕಾಯಿಲೆ. ಗುರಪ್‌ನಲ್ಲಿದ್ದ ಹಳ್ಳಿಯ ಮನೆಗೆ ಹೋದೆ. ಮನೆಯಲ್ಲಿ ಎಲ್ಲರೂ ಅತ್ಯಂತ ಚಿಂತಾಕ್ರಾಂತರಾದರು. ಈಚೆಗೆ ಗುರಪ್‌ಗೆ ಒಬ್ಬರು ಒಳ್ಳೆಯ ಡಾಕ್ಟರ್ ಬಂದಿದ್ದರು. ಅವರೇ ನನಗೆ ಚಿಕಿತ್ಸೆ ಮಾಡುತ್ತಿದ್ದರು. ಆದರೆ ಏನು ಮಾಡಿದರೂ ನನಗೆ ವಾಸಿಯಾಗಲಿಲ್ಲ. ಕಾಯಿಲೆ ಕ್ರಮೇಣ ಹೆಚ್ಚಾಗತೊಡಗಿತು. ನನ್ನ ಸಂಬಂಧಿಕರೆಲ್ಲ ಇನ್ನಷ್ಟು ಚಿಂತಿಸತೊಡಗಿದರು. ಆದರೂ ಚಿಕಿತ್ಸೆಯಲ್ಲಿ ಯಾವುದಕ್ಕೂ ಕಡಿಮೆ ಮಾಡಲಿಲ್ಲ. ಬರಬರುತ್ತ ನನಗೆ ಉಸಿರಾಟ ಮಾಡುವುದೇ ಕಷ್ಟವಾಗತೊಡಗಿತು. ಡಾಕ್ಟರ್ ಹೇಳಿದರು: ಆಕ್ಸಿಜನ್ ಸಿಲಿಂಡರ್ ಬೇಕಾಗುತ್ತದೆ. ಮನೆಯಿಂದ ಯಾರೋ ವರ್ಧಮಾನಕ್ಕೆ ಹೋದರು — ಆಕ್ಸಿಜನ್ ಸಿಲಂಡರ್ ತರಲು. ಆ ರಾತ್ರಿ ನನಗೆ ಸ್ಪಷ್ಟವಾಗಿ ನೆನಪಿದೆ. ನನ್ನ ಸಂಕಟ ಇಮ್ಮಡಿಯಾಗಿತ್ತು. ಅದು ನನ್ನ ಕೊನೆಯ ರಾತ್ರಿಯೆಂದೇ ನಾನು ಭಾವಿಸಿದೆ. ಮನೆಯಲ್ಲಿ ಯಾರಿಗೂ ನಿದ್ದೆಯಿಲ್ಲ. ಇದ್ದಕ್ಕಿದ್ದಂತೆ ನನಗೆ ಶ್ರೀಮಾತೆಯವರ ಮಾತು ನೆನಪಾಯಿತು. ಶ್ರೀಮಾತೆಯವರಿಗೆ ಕಾಯಿಲೆಯಾಗಿದ್ದಾಗ ಸಾಕ್ಷಾತ್ ಕಾಳೀಮಾತೆಯೇ ಅವರ ಸೇವೆ ಮಾಡಿದ್ದರು. ನನ್ನ ಈ ಕಠಿಣ ಪರಿಸ್ಥಿತಿಯಲ್ಲಿ ಶ್ರೀಮಾತೆ ನನ್ನನ್ನು ಬದುಕಿಸಲಾರರೆ? ಮತ್ತೆ ಮತ್ತೆ ನಾನು ಅವರನ್ನೇ ನೆನಪಿಸಿಕೊಳ್ಳುತ್ತಿದ್ದೆ. ಅವರನ್ನೇ ಕರೆಯುತ್ತಿದ್ದೆ. ಕೈಕಾಲು ಅಲುಗಾಡಿಸುವುದಕ್ಕೂ ನನಗೆ ಶಕ್ತಿಯಿಲ್ಲ. ಸುಮ್ಮನೆ ಅಳುತ್ತಿದ್ದೆ. ಅಷ್ಟರಲ್ಲಿ ಒಂದು ಘಟನೆ ನಡೆಯಿತು. ಹಠಾತ್ತನೆ ಸ್ಪಷ್ಟವಾಗಿ ನೋಡಿದೆ, ಶ್ರೀಮಾತೆಯವರಂತೆಯೇ ಒಬ್ಬರು ನನ್ನ ತಲೆಯ ಬಳಿಗೆ ಬಂದು ನಿಂತುಬಿಟ್ಟರು. ಹೌದಲ್ಲ , ಶ್ರೀಮಾತೆಯೇ! ಅದೇ ಮುಖ, ಅದೇ ಕಣ್ಣುಗಳು, ಅದೇ ಕೆಂಪಂಚಿನ ಸೀರೆ! ಅವರ ಎರಡು ಕಣ್ಣುಗಳಿಂದಲೂ ಕರುಣೆ ಉಕ್ಕಿ ಹರಿಯುತ್ತಿದೆ. ವಾಸಿಯಾಗುತ್ತಿದೆ ಎಂದೆನಿಸಿತು ನನಗೆ. ನನಗೆ ಕೈಕಾಲು ಅಲುಗಾಡಿಸಲು ಸಾಧ್ಯವಾಯಿತು. ಮಾತನಾಡಲೂ ಸಾಧ್ಯವೆನಿಸಿತು. ಶ್ರೀಮಾತೆ ನನಗೆ ಬಿಳಿಬಣ್ಣದ ಒಂದು ಮಾತ್ರೆ ಹಾಗೂ ನಾಫ್ತಲಿನ್‌ನಂತಹ ಹಲವು ಗುಳಿಗೆಗಳನ್ನು ನುಂಗಲು ಕೊಟ್ಟರು. ಆ ಮಾತ್ರೆ ನನ್ನ ಗಂಟಲಲ್ಲಿ ಇಳಿಯುತ್ತಿದ್ದಂತೆ ನನಗನ್ನಿಸಿತು, ನನ್ನ ಎಲ್ಲ ಅನಾರೋಗ್ಯವನ್ನೂ ಅದು ಸೆಳೆದುಕೊಂಡು ನನ್ನ ದೇಹದಲ್ಲಿ ಕರಗಿಹೋಗುತ್ತಿದೆ — ಎಂಬಂತೆ. ಬಳಿಕ ನಾನು ನಿದ್ರೆಗೆ ಜಾರಿದೆ, ಏನೊಂದೂ ನೆನಪಿಲ್ಲ. ಬೆಳಗಿನ ಜಾವ ನಿದ್ದೆ ಬಿಟ್ಟಿತು. ನನ್ನ ದೇಹದಲ್ಲಿ ಏನೂ ಕಷ್ಟ, ಯಾತನೆಯಿಲ್ಲ, ಯಾವುದೇ ರೋಗಗಳಿಲ್ಲ ಎಂದು ನನಗನ್ನಿಸಿತು. ನಾನು ವಾಸಿಯಾದೆ, ಸಂಪೂರ್ಣವಾಗಿ ನನಗೆ ವಾಸಿಯಾಗಿದೆ. ಅನೇಕ ದಿನಗಳ ನಂತರ ನಾನು, ನಾನಾಗಿಯೇ ಹಾಸಿಗೆ ಬಿಟ್ಟೆದ್ದೆ. ಎಲ್ಲರಿಗೂ ಆಶ್ಚರ್ಯವಾಗುವಂತೆ ನಡೆದಾಡಿದೆ. ಬೆಳಗಿನ ಹೊತ್ತು ಡಾಕ್ಟರ್ ಬಂದರು. ನಾನು ಅವರಿಗೆ ಜೋರಾಗಿಯೇ ಹೇಳಿದೆ: ''ಡಾಕ್ಟ್ರೆ, ನನಗೆ ಗುಣವಾಯಿತು. ಈಗ ನನ್ನ ರೋಗ ವಾಸಿಯಾಯಿತು.'' ಡಾಕ್ಟರರು ಅವಾಕ್ಕಾದರು. ಅವರೆಂದರು, ''ದೇವರೇ ನಿಮ್ಮನ್ನು ಗುಣಮುಖ ಮಾಡಿದರು.'' ಆಕ್ಸಿಜನ್ ಸಿಲಿಂಡರನ್ನು ಹಿಂದಿರುಗಿಸಬೇಕಾಯಿತು. ಕ್ರಮೇಣ ನಾನು ಆರೋಗ್ಯಪೂರ್ಣನಾದೆ. ಆರೋಗ್ಯ ಹೊಂದಿದ್ದಲ್ಲ ; ನನಗೆ ಎರಡನೇ ಜನ್ಮದೊರಕಿತು. ನನಗೆ ಬದುಕನ್ನು ನೀಡಿದವರೇ — ಶ್ರೀಮಾತೆ.

# ಶ್ರೀಮಾತೆಯವರ ಸ್ಮೃತಿಚಿತ್ರ

**ಶಿವರಾಣಿ ಸೇನ್**

ಈಗ ನನಗೆ ಎಂಬತ್ತೇಳು ವರ್ಷ ವಯಸ್ಸು (೧೯೯೨ರಲ್ಲಿ). ಇಂದಿಗೆ ಸುಮಾರು ೭೯-೮೦ ವರ್ಷಗಳ ಹಿಂದೆ(೧೯೧೨-೧೩), ನನಗೆ ಏಳು-ಎಂಟು ವರ್ಷ ವಯಸ್ಸಾಗಿದ್ದಾಗ ನಾನು ಶ್ರೀಮಾತೆಯವರನ್ನು ಮೊದಲ ಬಾರಿಗೆ ಭೇಟಿಯಾದೆ. ಬಾಗ್‌ಬಜಾರಿನಲ್ಲಿ ನನ್ನ ಮಾವನ ಮನೆಯಿತ್ತು. ನನ್ನ ಅತ್ತಿಗೆ ಆಗಾಗ ಬಾಗ್‌ಬಜಾರಿನಲ್ಲಿದ್ದ 'ಶ್ರೀಮಾತೆಯವರ ಮನೆ'ಗೆ ಹೋಗುತ್ತಿದ್ದರು — ಶ್ರೀಮಾತೆಯವರ ದರ್ಶನ ಪಡೆಯಲು. ನಾನು ಮಾವನ ಮನೆಗೆ ಹೋದಾಗಲೆಲ್ಲ ನನ್ನ ಅತ್ತಿಗೆಯೊಂದಿಗೆ 'ಶ್ರೀಮಾತೆಯವರ ಮನೆ'ಗೆ ಹೋಗುತ್ತಿದ್ದೆ. ಶ್ರೀಮಾತೆಯವರು ಬದುಕಿದ್ದವರೆಗೂ ನಾನು ನಡುನಡುವೆ ಬಾಗ್‌ಬಜಾರಿನಲ್ಲಿ ಅವರ ದರ್ಶನ ಮಾಡಿ ಧನ್ಯಳಾಗಿದ್ದೇನೆ. ಆಗ ನನಗೆ ಸಣ್ಣ ವಯಸ್ಸು; ಶ್ರೀಮಾತೆಯವರ ಮಹಿಮೆ ನನಗೆ ಆಗ ಸ್ವಲ್ಪವೂ ಅರ್ಥವಾಗಿರಲಿಲ್ಲ. ಕೇವಲ ಶ್ರೀಮಾತೆಯವರನ್ನು ಕಂಡರೆ, ಅವರ ಮಾತುಗಳನ್ನು ಕೇಳಿದರೆ ಜೀವ ತುಂಬಿಬರುತ್ತಿತ್ತು. ಶ್ರೀಮಾತೆಯವರ ಬಳಿಗೆ ಹೋದಾಗಲೆಲ್ಲ ನನಗೆ ಯಾವಾಗಲೂ ಭಕ್ಷೀಸು ಸಿಗುತ್ತಿತ್ತು- ಅವರು ಕೈತುಂಬ ಪ್ರಸಾದ ಕೊಡುತ್ತಿದ್ದರು. ಶ್ರೀಮಾತೆ ಆರೋಗ್ಯದಿಂದಿದ್ದ ದಿನಗಳವರೆಗೂ ಅವರು ತಮ್ಮ ಕೈಗಳಿಂದಲೇ ನನಗೆ ಪ್ರಸಾದ ಕೊಡುತ್ತಿದ್ದರು. ಸಂದೇಶ (ಸಿಹಿ ತಿಂಡಿ), ಹಣ್ಣುಗಳು, ಇನ್ನೂ ಏನೇನೋ! ನನ್ನ ಎರಡು ಪುಟ್ಟ ಕೈಗಳಲ್ಲಿ ಅದು ಹಿಡಿಸುತ್ತಿರಲಿಲ್ಲ. ಶ್ರೀಮಾತೆಯವರ ಮಹಿಮೆ ಅರ್ಥವಾಗಿರಲಿ, ಇಲ್ಲ